"SATYAVADI". Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 23 | ಗುರುವಾರ 25—10—45 | ಬೆಲೆ ಪ್ರತಿ 3 ಪೈ

ವಿವಿಧ ವರ್ತಮಾನ

ಐದು ದಿವಸಗಳು ನಾಗಪುರದಲ್ಲಿ ಝಾಂಡಾ ಮೊಲಿಗಳ ಮುಷ್ಕರ ನಡೆದು ಅವರ ವಿಜಯದಿಂದ ಮುಕ್ತಾಯವಾಯಿತು. ಮುನಿಸಿಪಾಲಿಟಿಯು ಝಾಂಡಾ ಮಾಲಿಗಳ ಹಲವು ಬೇಡಿಕೆಗಳಿಗೆ ಒಪ್ಪಣೆ ಇತ್ತಿದೆ.

ಂ ಂ

ಕಟಕ್ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ 32 ಮಂದಿ ಕಾಂಗ್ರೆಸ್ ಸದಸ್ಯರು ಪ್ರತಿಸ್ಪರ್ಧಿಗಳಿಲ್ಲದೆ ಚುನಾವಣೆಯಾಗಿರುತ್ತಾರೆ.

ಂ ಂ

ಸ್ಟಾಲಿನ್ನರು ರಷ್ಯಾ ಕ್ರಾಂತಿ ದಿನವಾದ ನವೆಂಬರ್ 7 ನೇ ತಾರೀಖಿನ ದಿವಸ ಜಗತ್ತಿನಲ್ಲೇ ಅತ್ಯಂತ ಪ್ರಮುಖವಾದ ಮಹಾ ಪ್ರಕಟಣೆಯೊಂದನ್ನು ಹೊರಡಿಸುವರೆಂದು ಹೇಳಲಾಗಿದೆ.

ಂ ಂ

ಬರ್ಲಿನ್ನಿನಲ್ಲಿ ಈವರೆಗಿದ್ದ ನಾಜೀ ಶಾಸನಗಳನ್ನೆಲ್ಲಾ ನಿರ್ಜೀವಗೊಳಿಸಲಾಗಿದೆಯೆಂದು ಹೇಳಲಾಗಿದೆ.

ಂ ಂ

ನ್ಯೂರೆಂಬರ್ಗಿನಲ್ಲಿ 23 ಮಂದಿ ನಾಜಿ ಯುದ್ಧ ಪಾತಕಿಗಳ ವಿಚಾರಣೆ ನಡೆಯುತ್ತಿದೆ.

ಂ ಂ

ಮುಂದಿನ ಡೇನಿಷ್ ಚುನಾವಣೆಗಳಲ್ಲಿ ನಾಜೀ ಪಕ್ಷವೂ ಭಾಗವಹಿಸುವದೆಂದು ಪ್ರಕಟವಾಗಿದೆ.

ಂ ಂ

ಇಂಡಿಯನ್ ನ್ಯಾಷನಲ್ ಆರ್ಮಿ ವಿಚಾರಣೆಯ ಕಾಲದಲ್ಲಿ ಜಪಾನ್‌ನಿಂದ ಪ್ರತಿನಿಧಿಯೊಬ್ಬರು ಬರುವರು.

ಂ ಂ

ಬ್ರಿಟಿಷರೇ ಈಜಿಪ್ಟು ಬಿಟ್ಟ ಹೊಡಿ ಎಂದಾಗಿ ಕೈರೋವಿನ ಫಾದ ವಿದ್ಯಾಲಯದ ಮುಂದೆ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ ಘೋಷಣೆಗಳನ್ನು ಕೂಗಿದರು.

ಂ ಂ

ಇದೇ 31 ರಲ್ಲಿ ಮೈಸೂರಿನ ಗೃಹ ಸಹಕಾರ ಸಂಘ ಭವನದಲ್ಲಿ ಶ್ರೀ ಕೃಷ್ಣ ರಾಜೇಂದ್ರ ಮಿಲ್ಸ್ ಡೈರೆಕ್ಟರುಗಳ ಚುನಾವಣೆ ನಡೆಯುವುದು.



ಆಟೊ ಬಾಂಬು, ಶಾಂತಿಯ ಮುಂದಾಳೆಂದು 70 ವರ್ಷಗಳ ಹಿಂದೆಯೇ ಬೊಂಬಾಯಿನ ನ್ಯಾಷನಲ್ ಸ್ಪಿರುಚುಯಲ್ ಅಸೆಂಬ್ಲಿಯ ಬಾಹಾಉಲ್ಲಾರವರು ಭವಿಷ್ಯ ನುಡಿದಿದ್ದರೆಂದು ಹೇಳಲಾಗಿದೆ.

ಬೋಗ್ರಾ ರೈಲ್ವೆ ಸ್ಟೇಷನ್ನಿನ ಹತ್ತಿರ ವ್ಯಾಗನ್ನಿನಲ್ಲಿ ಬಾಂಬುಗಳು ಸ್ಫೋಟವಾಗಿ ನಷ್ಟವಾಗಿದೆ ವಿಚಾರಣೆಯವರು ತನಿಖೆ ನಡೆಸುತ್ತಿದ್ದಾರೆ.

ಸೈಗಾಮಿನ ಸರ್ಕಾರಿ ಇನ್‌ಫರ್ಮೇಷನ್ ಬ್ಯೂರೋವಿಗೆ ಯಾರೋ ಬಾಂಬು ಎಸೆದರೆಂದು ವರ್ತಮಾನ ಬಂದಿದೆ.

ಇಂಡಿಯನ್ ನ್ಯಾಷನಲ್ ಆರ್ಮಿ ಡಿಫೆನ್ಸಿಗೆ ಅನೇಕ ಬಾರ್ ಅಸೋಸಿಯೇಷನ್‌ಗಳೂ ವಕೀಲರೂ ಸಹಾಯಮಾಡುವುದಾಗಿ ತಿಳಿಸಿರುವರಂತೆ.

ನಿಮ್ಮ ಯಂತ್ರಗಳನ್ನು ನೀವೇ ತಯಾರಿಸಿಕೊಳ್ಳಿರೆಂದು ಸರ್ ಸಿ. ವಿ. ರಾಮನ್ನರು ಕೈಗಾರಿಕೆಯವರಿಗೆ ತಿಳಿಸಿದರು.

ಜಪಾನಿನ ವಿರುದ್ಧ ಅಮೇರಿಕಾಕ್ಕೆ ರಕ್ಷಣೆಗಾಗಿ ಕೆಲ ದ್ವೀಪ ಸಮೂಹಗಳ ಸ್ವಾಸ್ಥ್ಯ ಅಮೇರಿಕಾವ ವಿದೇಶಾಂಗ ಮಂತ್ರಿ ಬೇಡಿದಾಗ ರಷ್ಯಾದ ಮಾಲಟೋವ ನಿಜ ಅಮೇರಿಕಾಕ್ಕೆ ತನ್ನ ರಕ್ಷಣೆಗಾಗಿ ಫಾಸಿಫಿಕ್ಕದಲ್ಲಿ ದ್ವೀಪ ಸಮೂಹಗಳ ಸಿಲ್ವಾಣಗಳು ಬೇಕಾಗಿವೆ. ಆದರೆ ರಕ್ಷಣೆಯು ಜಪಾನ ವಿರುದ್ಧವಲ್ಲ ರಷ್ಯಾದ ವಿರುದ್ಧ ಎಂದು ನಗುತ್ತಾ ಹೇಳಿದರು.

ಸಂಸ್ಥಾನಗಳಲ್ಲಿ ಪ್ರಜಾಚಳವಳಿಯು ಜವಾಬ್ದಾರಿ ಸರಕಾರಗಳ ಸ್ಥಾಪನೆಗಾಗಿ, ಪ್ರಜಾಪ್ರತಿನಿಧಿಗಳಿಗೆ ರಾಜ್ಯಾಡಳಿತ ವಹಿಸಿದಿದ್ದಲ್ಲಿ ರಾಜಮಹಾರಾಜರು ಉಳಿಯಲಾರರು ಎಂದು ಜಯಪುರದಲ್ಲಿ ಸಭೆಯೊಂದರಲ್ಲಿ ಮಾಡಿದ ದಲ್ಲಿ ಶ್ರೀ ನೆಹರೂರವರು ಹೇಳಿದರು.

ನೆಹರೂರವರ ವೀರವಾಣಿ

ವಾರ್ತಾತರಂಗ

ಅಸೊ ದಿ ದ ಬುಂದ ನರವಿಯು ಪ್ರಕಾರ ವಾಷಿಂಗ್ಟನ್ನಿಗೆ ನಿನ್ನೆ ಮುಂಜಾನೆ 2—45 ಶಿರಚ್ಛೇದನವಾಯ್ತು

ಂ ಂ

ಇಂಡೋನೇಶಿಯನ್ನರಿಗೂ ಡಚ್ಚರಿಗೂ ಬಟೇವಿಯಾ ಸಮೀಪದಲ್ಲಿ ಕದನ ಪ್ರಾರಂಭವಾಗಿದೆ ಇಂಡೋನೇಷಿಯನ್ನರ ಪರ ಒಂದು ಲಕ್ಷ ಸೈನ್ಯವಿದೆ.

ಂ ಂ

ಬಟೇವಿಯಾದಲ್ಲಿ ಡಚ್ ನಾಗರೀಕ ಅಧಿಕಾರಿಗಳ ಆಡಳಿತದಲ್ಲಿ ಇಂಡೋನೇಷಿಯರ್ ಕೈದಿಗಳು ತೊಂದರೆಯನ್ನನುಭವಿಸುತ್ತಿದ್ದುದನ್ನು ಬ್ರಿಟಿಷರ ಪರಿಶೀಲನೆ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವರು.

ಂ ಂ

ಜಾವಾದ ಪರಿಸ್ಥಿತಿಯನ್ನು ಕುರಿತು ಸಾಮ್ರಾಜ್ಯರಕ್ಷಕರ ರೀತಿಯನ್ನು ಪಂಡಿತ್ ಜವಾಹರಲಾಲ್ ನೆಹರು ಖಂಡನೆ ಮಾಡಿರುವರು.

ಂ ಂ

ಇಂಗ್ಲೆಂಡಿನಲ್ಲಿ ಆದಾಯದ ತೆರಿಗೆಯನ್ನು ಪೌಂಡಿಗೆ ಹತ್ತು ಷಿಲಿಂಗ್ ಇಳಿಸಲಾಗಿದೆ.

ಂ ಂ

ಕೂಲಿಕಾರರ ಸಮ್ಮೇಳನದಲ್ಲಿ ಭಾರತದ ಹೈ ಕಮಿಷನರಾದ ಸರ್ ರಾಗನಾಥರು ಭಾರತಕ್ಕೆ ತುಂಬಾ ಕೈಗಾರಿಕಾ ಸಾಮಗ್ರಿಗಳು ಬೇಕೆಂಬುದಾಗಿ ಹೇಳಿದರು

ಂ ಂ

ಮುಂದಿನ ಮಾಹೆ 14 ರೊಳಗೆ ಅಮೇರಿಕ ಸೇನೆ ಚೀನಾವನ್ನು ಪೂರ್ಣವಾಗಿ ತ್ಯಜಿಸುವುದಾಗಿ ಗೊತ್ತಾಗಿದೆ.

ಂ ಂ

ಕೊರಿಯಾದ ಆರ್ಥಿಕ ಮತ್ತು ಕೈಗಾರಿಕಾ ನಾಯಕರು ಕೊರಿಯಾದ ಆಡಳಿತವನ್ನು ವಹಿಸಿಕೊಳ್ಳಲು ಸಿದ್ಧರಿರುವದಾಗಿ ತಿಳಿಯಬಂದಿದೆ. ಕೊರಿಯಾದಲ್ಲಿ 10 ರಾಜಕೀಯ ಪಕ್ಷಗಳಿವೆ

1 ಕಸವಿದ್ದಲ್ಲಿ ಪಾಯಿಲೆ.

2 ಕಸವನ್ನೆಲ್ಲಾ ಮುನಿಸಿಪಲ್ ತಿಪ್ಪೆಯಲ್ಲೇ ಹಾಕಿರಿ. ನಿಮ್ಮ ಮಕ್ಕಳನ್ನು ರಸ್ತೆಗಳಲ್ಲಿ ಹೇಸಿಗೆ ಮಾಡಲು ಬಿಡಬೇಡಿರಿ.

[ಮೈ. ಸಾರಸಭಾ ಪ್ರ|| ಸಮಿತಿ

ಸಾಯಿಬಾಬರ ಮಹಾತ್ಮೆ

ಪ್ರತಿಯೋರ್ವ ಮಹಾತ್ಮನಿಗೆ ಕಷ್ಟಗಳು ಬಂದಿವೆ. ಪ್ರತಿಯೋರ್ವ ಮಹಾತ್ಮನನ್ನು ಜನರು ಮೊದಲು ದ್ವೇಷಿಸಿದ್ದುಂಟು. ಸಾಯಿಬಾಬಾರೂ ಇದಕ್ಕೆ ಹೊರತಾದವರಲ್ಲ. ಸಾಯಿಬಾಬರು ಜನಾದರ ಹೊಂದುತ್ತಿರುವುದನ್ನು ಕಂಡು, ಕೆಲವರಲ್ಲಿ ದ್ವೇಷಾಸೂಯೆಗಳು ಹೆಚ್ಚಿದುವು. ಒಮ್ಮೆ, ಅರ್ಧರಾತ್ರಿಯ ಸಮಯ. ಜನರು, ಬಾಬಾರವರಿಗೆ, ದೀಪ ಉರಿಸಲು ಎಣ್ಣೆಕೊಡಲೊಪ್ಪಲಿಲ್ಲ. ಬಾಬಾರವರು ಬೇಸರಗೊಳ್ಳಲಿಲ್ಲ. ತಾನಾಗಿ ಯಾರೊಡನೆಯೂ ಎಣ್ಣೆ ಬೇಡ ಹೋಗಲಿಲ್ಲ. ಆದರೆ ಮರುದಿನ ಜನರು ಬರುವಾಗ ದೀಪಗಳು ಉರಿಯುತ್ತಿದ್ದವು. ಎರಡು ದಿನಗಳತನಕ ದೀಪಗಳು ಬಂದೇ ಸಮನೆ ಉರಿದವು. ಮತ್ತೆ ನೋಡಲಾಗಿ ಆ ದೀಪಗಳಲ್ಲಿ ಎಣ್ಣೆ ಇಂದೆ ಬರೇ ನೀರು ಮಾತ್ರ ಇತ್ತು. ನೀರಿನಿಂದಲೇ ಬಾಬಾರವರು ದೀಪಾವಳಿ ಮಾಡಿದ್ದನ್ನು ಕಂಡು ಜನರು ವಿಸ್ಮಯಗೊಂಡರು. ಆ ಮತ್ಸರಿಕೆಗಳೆಲ್ಲ ಅಂದಿನಿಂದ ಬಾಬಾರವರ ವಿಧೇಯ ಅನುಯಾಯಿಗಳಾದರು.

ಒಮ್ಮೆ ಬಾಬಾರವರು ತಮ್ಮ ಮುಂದಿರುವ ಹೋಮಕುಂಡದೊಳಗೆ ಕೈಹಾಕಿದುದನ್ನು ಕಂಡು ಶಿಷ್ಯರು ಬೆರಗಾದರು. ಶಿಷ್ಯರು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಲು, ಬಾಬಾರವರು 'ಈಗ ಸ್ವಲ್ಪ ವಂಚಿವಾಗಿ ಓರ್ವ ಹೆಂಗಸು ಅನತಿ ದೂರದಲ್ಲಿರುವ ಒಡ ಮನೆಯಲ್ಲಿ; ತನ್ನೊಂದಿಗೆ ಮಗುವನ್ನು ಇರಿಸಿಕೊಂಡು ಒಲೆಯು ಮುಂಪೆ ಬೆಂಕಿ ಮಾಡುತ್ತಿರಲು ಅಜಾಗ್ರತೆಯಿಂದ ಮಗುವು ಒಲೆಗೆ ಬಿತ್ತು. ಆ ಮಗುವನ್ನು ರಕ್ಷಿಸಲು ನಾನು ಈ ಹೋಮಕುಂಡದಲ್ಲಿ ಕೈ ಹಾಕಿದೆ' ಎಂದರು. ವಿಚಾರಿಸಿ ನೋಡಲಾಗಿ ಎಲ್ಲಿಯೋ ಈ ಘಟನೆಯು ನಡೆದುದು ರುಜುವಾತಾಯಿತು.

ಬಾಬಾರವರ ಜೀವನದಲ್ಲಿ ಹೆಣ್ಣು ಮತ್ತು ಹೊನ್ನಿಗೆ ಸ್ಥಾನವಿರಲಿಲ್ಲ. ಶಿರ್ದಿ ಆಶ್ರಮಕ್ಕೆ ಬಂದು ನಿತ್ಯವೂ ರಾಶಿರಾಶಿಯಾಗುತ್ತಿದ್ದ ದ್ರವ್ಯವು ದೀನ ದರಿದ್ರರ ಸೇವೆಗಾಗಿ ವಿನಿಯೋಗವಾಗುತ್ತಿತ್ತು.



ಆ ಮ ಶ ಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾತ್ರಿ ....
ಗು ಣ ಕಾ ರಿಯಾ ದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸಾ ಪ್ಲಿ ಕೆ ಸ್ಟ ರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

AT Opera
3 rd Week
ರಂಜಕ್, ಟಿ. ಆರ್, ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ
ಶಾಲಿವಾಹನ
Morning Shows
From 26-10-45
In Old California
At Ranjit
Humayun
7 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್,, ಷಾ ನವಾಜ್
ಪಾತ್ರವಹಿಸಿರುವರು

ಸುಖ ಆರೋಗ್ಯ ಆನಂದದಾಯಕ
ಜೀ ವಿ ತ ಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಡ್ಡು ಒಂದು ಸಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೩-೪-೦ ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಔತರಿಯಾದುದು. ವಿವರಂಗಳಿಗೆ ಪತ್ರ ವ್ಯಾಪಾರಕ್ಕೆ ಬರೆಯಿರಿ —

ವಲ್ಲಭದಾಸ್ ತೇಜ್ ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.